ಹಾಲು ಕುಡಿಸಿದರೂ ಅಷ್ಟೇನೂ ತೊಂದರೆಯಾಗದು. ಆದರೆ ಅವಧಿಪೂರ್ವ ಹುಟ್ಟಿದ ನವಜಾತ ಶಿಶುವಿಗೆ ಎದೆಹಾಲನ್ನೇ ಕುಡಿಸಬೇಕಾದ ಅನಿವಾರ್ಯ ಇದೆ' ಎನ್ನುತ್ತಾರೆ ಬೆಂಗಳೂರಿನ ಫೋರ್ಟಿಸ್ ಲಾ ಫೆಮ್ಮೆ ಆಸ್ಪತ್ರೆಯ ನವಜಾತ ಶಿಶು ವಿಭಾಗದ ಮುಖ್ಯಸ್ಥ ಡಾ. ಶ್ರೀನಾಥ್ ಎಸ್. ಮಣಿಕಂಠ.

'ಶಿಶುವಿಗೆ ತಾಯಿಯ ಹಾಲು ಸಾಲದಿದ್ದರೆ ಹಾಲಿನ ಪುಡಿಯಿಂದ ತಯಾರಿಸಿದ ಮಿಶ್ರಣ ನೀಡುವಂತೆ ವೈದ್ಯರು ಸಲಹೆ ನೀಡುತ್ತಾರೆ. ಎದೆಹಾಲು ಕುಡಿಸುವುದರಿಂದ ಶಿಶುಗಳಿಗೆ ಅನಾರೋಗ್ಯದ ಅಪಾಯ ಕಡಿಮೆ. ಕೆಲವು ತಾಯಂದಿರು ಮಕ್ಕಳಿಗೆ ಹಾಲು ಸಾಲದೆ ಕೊರಗುತ್ತಿರುತ್ತಾರೆ. ಎದೆಹಾಲನ್ನು 'ದ್ರವರೂಪದ ಚಿನ್ನ' (ಲಿಕ್ವಿಡ್ ಗೋಲ್ಡ್) ಎಂದು ಕರೆಯಲಾಗುತ್ತದೆ. ಹಾಗಾಗಿ ಇದನ್ನು ಹಾಳು ಮಾಡಬೇಡಿ; ದಾನ ಮಾಡಿ ಎಂದು ಬಾಣಂತಿಯರಲ್ಲಿ ಮನವಿ ಮಾಡುತ್ತಿದ್ದೇವೆ' ಎನ್ನುತ್ತಾರೆ ಡಾ. ಶ್ರೀನಾಥ್.

'ಸಹಜವಾಗಿ ಹೆರಿಗೆಯಾದ ತಾಯಂದಿರಲ್ಲಿ ಎದೆಹಾಲು ಯಥೇಚ್ಛವಾಗಿ ಉತ್ಪತ್ತಿಯಾಗುತ್ತದೆ. ತನ್ನ ಮಗುವಿಗೆ ಹಾಲುಣಿಸಿ ಮತ್ತೂ ಹಾಲು ಮಿಕ್ಕುತ್ತದೆ. ಇದರಿಂದ ಎದೆ ಭಾರವಾಗಿ ಎಷ್ಟೋ ತಾಯಂದಿರು ಎದೆಹಾಲನ್ನು ಹಾಲನ್ನು ಹಿಂಡಿ ತೆಗೆದು ಚೆಲ್ಲುತ್ತಾರೆ. ಆದರೆ ಈ ಹಾಲನ್ನು 'ಅಮಾರ'ಕ್ಕೆ ದಾನ ಮಾಡಿದರೆ ಹಾಲಿಗಾಗಿ ಹಪಹಪಿಸುವ ಅವಧಿಪೂರ್ವ ಮಕ್ಕಳ ಜೀವ ಉಳಿಸಬಹುದು. ತಾಯಂದಿರಲ್ಲಿ ಈ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಬೇಕಾಗಿದೆ. ಹೆಚ್ಚು ಹೆಚ್ಚು ತಾಯಂದಿರು ಹೆಚ್ಚುವರಿ ಹಾಲನ್ನು ಇನ್ನೊಂದು ಕೂಸಿಗೆ ನೀಡಲು ನೆರವಾಗುವಲ್ಲಿ ಶ್ರಮಿಸಬೇಕಾಗಿದೆ' ಎನ್ನುತ್ತಾರೆ ಲಾ ಫೆಮ್ಮೆಯಲ್ಲಿ ಸ್ತ್ರೀರೋಗ ತಜ್ಞೆಯಾಗಿರುವ ಡಾ. ಪ್ರತಿಮಾ ರೆಡ್ಡಿ.

'ಎದೆಹಾಲು ಕುಡಿಸುವುದರಿಂದ ಬೇರೆ ಯಾವುದೇ ಆರೋಗ್ಯ ಸಮಸ್ಯೆ ಉದ್ಭವಿಸದು. 26 ವಾರಗಳಿಗೂ ಮುಂಚೆ ಮಗು ಜನಿಸಿದರೆ ಉಳಿಯುವುದು ತುಂಬ ಕಷ್ಟ. ಅವಧಿಪೂರ್ವ ಮಕ್ಕಳ ಲಾಲನೆ ಪಾಲನೆಯೂ ಬಹಳ ಕಷ್ಟ. ಮಗು ಬಹು ಕೃಶ ಹಾಗೂ ಸೂಕ್ಷ್ಮವಾಗಿರುತ್ತದೆ. ಇಂತಹ ಮಕ್ಕಳಿಗೆ ಎದೆಹಾಲನ್ನೇ ನೀಡಬೇಕಾದ ಅನಿವಾರ್ಯತೆ ಇದೆ' ಎನ್ನುತ್ತಾರೆ ಡಾ. ಪ್ರತಿಮಾ.

'ನನಗೆ ಮಗು ಹುಟ್ಟಿದ ಎರಡು ದಿನದಲ್ಲೇ ಹೆಚ್ಚುವರಿ ಹಾಲನ್ನು 'ಅಮಾರ'ಕ್ಕೆ ದಾನ ಮಾಡಲಾರಂಭಿಸಿದೆ. ಕಳೆದ ಫೆಬ್ರುವರಿ ತಿಂಗಳಿನಿಂದ ಐದು ತಿಂಗಳ ಕಾಲ ಪ್ರತೀದಿನ ಎದೆಹಾಲು ನೀಡಿದ್ದೇನೆ. ಸುಮಾರು 20 ಲೀಟರ್‌ಗಳಷ್ಟು ಹಾಲನ್ನು ನೀಡಿದ್ದೇನೆ. ಖಾಸಗಿ ಆಸ್ಪತ್ರೆಯಲ್ಲಿ ವೈದ್ಯೆಯಾಗಿ ಕೆಲಸ ಮಾಡುವ ನಾನು ಮಗು ಹುಟ್ಟಿದ ಮೂರು ತಿಂಗಳ ಬಳಿಕ ಮತ್ತೆ ಕರ್ತವ್ಯಕ್ಕೆ ಹಾಜರಾದೆ. ಆಗ ಹೆಚ್ಚುವರಿ ಹಾಲನ್ನು ಫ್ರೀಜರ್‌ನಲ್ಲಿಟ್ಟು ಹೋಗುತ್ತಿದ್ದೆ. ಮನೆಯಲ್ಲಿ ನಾನಿಲ್ಲದ ವೇಳೆಯಲ್ಲಿ ಪೋಷಕರು ಅದನ್ನು ಮಗುವಿಗೆ ಕುಡಿಸುತ್ತಿದ್ದರು. ಮಗು ಆರೋಗ್ಯಪೂರ್ಣವಾಗಿ ಬೆಳೆದಿದೆ. ಅಗತ್ಯ ಇರುವ ಮಕ್ಕಳಿಗೂ ಎದೆಹಾಲು ದೊರೆತ ಹಾಗಾಗಿದೆ ಎಂಬ ಸಂತೃಪ್ತಿ ನನಗಿದೆ' ಎನ್ನುತ್ತಾರೆ ಮಕ್ಕಳ ತಜ್ಞೆಯಾಗಿರುವ ಡಾ. ಸುಮನಾ.

'ಎದೆಹಾಲು ಹೆಚ್ಚು ಇರುವ ತಾಯಂದಿರು ಅದನ್ನು ವ್ಯರ್ಥ ಮಾಡಬಾರದು. ಎಷ್ಟೋ ತಾಯಂದಿರಿಗೆ ಎದೆಹಾಲು ನೀಡುವ ಭಾಗ್ಯ ಇರುವುದಿಲ್ಲ. ಅಂಥವರಿಗೆ ನಮ್ಮ ಹಾಲನ್ನು ನೀಡಿ ಅನೇಕ ಮಕ್ಕಳ ಜೀವ ಉಳಿಸಬಹುದು. ಇದು ಇನ್ನಷ್ಟು ತಾಯಂದಿರಿಗೆ ಸ್ಫೂರ್ತಿಯಾಗಬೇಕು' ಎನ್ನುತ್ತಾರೆ ಡಾ. ಸುಮನಾ.



### ಎದೆಹಾಲು ಬ್ಯಾಂಕ್

ಇಡೀ ದೇಶದಲ್ಲಿ ಒಟ್ಟು 140 ಎದೆಹಾಲು ಬ್ಯಾಂಕ್‌ಗಳಿವೆ. ಬೆಂಗಳೂರಿನಲ್ಲಿ ಸಾರ್ವಜನಿಕ ಎದೆಹಾಲು ಬ್ಯಾಂಕ್ ಇರುವುದು ಕಳೆದ ವರ್ಷ ಆರಂಭವಾದ 'ಅಮಾರ' ಒಂದೇ. ಆದರೆ ಖಾಸಗಿ ಬ್ಯಾಂಕ್‌ಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಆದರೆ ಈ ಬ್ಯಾಂಕ್‌ಗಳು ಎದೆಹಾಲಿಗೆ ದುಬಾರಿ ಶುಲ್ಕವನ್ನೂ ವಿಧಿಸುತ್ತವೆ.

### 176 ಮಕ್ಕಳು ಫಲಾನುಭವಿಗಳು

ಫೋರ್ಟಿಸ್ ಲಾ ಫೆಮ್ಮೆ ಆರಂಭವಾಗಿ ಒಂದೇ ವರ್ಷದೊಳಗೆ 176 ನವಜಾತ ಶಿಶುಗಳಿಗೆ ಎದೆಹಾಲು ಪೂರೈಸಿದೆ. ನಗರದ ಇತರ 31 ಆಸ್ಪತ್ರೆಗಳ ಅವಧಿಪೂರ್ವ ಮಕ್ಕಳ ತುರ್ತುಚಿಕಿತ್ಸಾ ಘಟಕ (ಎನ್‌ಐಸಿಯು) ದಲ್ಲಿ ಜನಿಸಿದ ಅವಧಿಪೂರ್ವ ಮಕ್ಕಳು ಈ ಲಾಭ ಪಡೆದಿವೆ. 'ಅಮಾರ'ಕ್ಕೆ ಹಾಲು ಪೂರೈಸುವ ತಾಯಂದಿರ ಸಂಖ್ಯೆಯೂ ಹೆಚ್ಚುತ್ತಿದೆ. ಸುಮಾರು 75 ತಾಯಂದಿರು ಸ್ವಯಂಪ್ರೇರಿತರಾಗಿಯೇ ಬಂದು ಹಾಲು ನೀಡಿದ್ದಾರೆ.

ಸಂಪರ್ಕ: ಅಮಾರ—99992 87636


ನಂ.1 ವಶೀಕರಣ ಮೋಡಿಗಾರರು – ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ – 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸ್ಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾಧ್ಯ. ನಿಗೂಢ ಗುಪ್ತ ಸಮಸ್ಯೆಗಳೇನೇ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ